ದಾವಣಗೆರೆ ವಿಶ್ವವಿದ್ಯಾನಿಲಯ
registrarevaluationdvg@gmail.com ಕುಲಸಚಿವ(ಪರೀಕ್ಷಾಂಗ)ರವರಕಛೇರಿ
ದೂರವಾಣಿ:08192-208420,10 ಶಿವಗಂಗೋತ್ರಿ,ದಾವಣಗೆರೆ-577 002

=====================================================

ಸಂ:ದಾವಿ/ಪವಿ/2016/17 ದಿನಾಂಕ:21/03/2017

**ಪ್ರಕಟಣೆ**

ವಿಷಯಃ-ನವೆಂಬರ್/ಡಿಸೆಂಬರ್-2016 ರಲ್ಲಿ ನಡೆದ ಬಿ.ಇ.ಡಿ ಪದವಿ ಪರೀಕ್ಷೆಗಳ ಉತ್ತರ ಪತ್ರಿಕೆ ಮರುಮೌಲ್ಯಮಾಪನ/ಮರುಸಂಕಲನಕ್ಕೆ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ:- ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20/3/2017

*********

ನವೆಂಬರ್/ಡಿಸೆಂಬರ್-2016 ರಲ್ಲಿ ನಡೆದ ಬಿ.ಇ.ಡಿ. ಪದವಿ ಪರೀಕ್ಷೆಯ ಉತ್ತರ ಪತ್ರಿಕೆಯ ಮರುಮೌಲ್ಯಮಾಪನ/ಮರುಸಂಕಲನಕ್ಕೆ ಅರ್ಜಿಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿಮಾಡಿ ಸಂಬಂಧಿಸಿದ ಶುಲ್ಕವನ್ನು ಕಾಲೇಜಿನಲ್ಲಿ ಪಾವತಿಸಬೇಕು, ಅಥವಾ ಒಟ್ಟು ಮೊತ್ತಕ್ಕೆ ಎಸ್.ಬಿ.ಎಂ ಬ್ಯಾಂಕ್‌ನಿಂದ ಡಿ.ಡಿ.ಯನ್ನು ಪಡೆದು ಅರ್ಜಿಯೊಂದಿಗೆ ಲಗತ್ತಿಸಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು.

**ಮರುಸಂಕಲನ/ಮರುಮೌಲ್ಯಮಾಪನಕ್ಕೆ ಕಾಲೇಜಿಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:27/03/2017. ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಲಾಗುವುದು.**

| ಕ್ರ.ಸಂ | ವಿವರ | ನಿಗದಿಪಡಿಸಿದ ಶುಲ್ಕದ ಮೊತ್ತ | ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕಡೆಯ ದಿನಾಂಕ | ಪ್ರಾಂಶುಪಾಲರು ಪದವಿವಾರು ಪಟ್ಟಿಯನ್ನು ದಾ.ವಿ.ವಿ.ಗೆ ಸಲ್ಲಿಸಲು ಕಡೆಯ ದಿನಾಂಕ |
|---|---|---|---|---|
| 1 | ಜೆರಾಕ್ಸ್ ಪ್ರತಿ ಪತ್ರಿಕೆಗೆ | ರೂ.580-00 | 27/03/2017 | 30/03/2016 |
| 2 | ಮರುಸಂಕಲನಕ್ಕೆ (ಪ್ರತಿ ಉತ್ತರ ಪತ್ರಿಕೆಗೆ) | ರೂ.230-00 | | |
| 3 | ಮರುಸಂಕಲನ ಮತ್ತು ನೋಡುವಿಕೆ (ಪ್ರತಿ ಪತ್ರಿಕೆ) | ರೂ.465-00 | | |
| 4 | ಮರುಮೌಲ್ಯಮಾಪನಕ್ಕೆ (ಪ್ರತಿ ಉತ್ತರ ಪತ್ರಿಕೆ) | ರೂ.450-00 | | |
| 5 | ಮರುಮೌಲ್ಯಮಾಪನಕ್ಕೆ ಹಾಗೂ ನೋಡಿವಿಕೆ(ಪ್ರತಿ ಉತ್ತರ ಪತ್ರಿಕೆ) | ರೂ.680-00 | | |

ವಿದ್ಯಾರ್ಥಿಗಳಿಂದ ಸ್ವೀಕೃತವಾದ ಮರುಮೌಲ್ಯಮಾಪನ ಮತ್ತು ಮರುಸಂಕಲನ ಅರ್ಜಿಗಳನ್ನು ಪ್ರಾಂಶುಪಾಲರು ಪರಿಶೀಲಿಸಿ ಕ್ರೋಢೀಕರಿಸಿದ ಪಟ್ಟಿಯನ್ನು ದ್ವಿಪ್ರತಿಯಲ್ಲಿ ದಿನಾಂಕಃ 30/03/2017 ರೊಳಗಾಗಿ ಕುಲಸಚಿವರು (ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577002 ಇವರಿಗೆ ಸಲ್ಲಿಸತಕ್ಕದ್ದು.

ಜೆರಾಕ್ಸ್ ಪ್ರತಿ ಕೊಡುವ ಮತ್ತು ಉತ್ತರ ಪತ್ರೀಕೆ ನೋಡುವ ದಿನಾಂಕ:01/04/2017 ಸಮಯ ಮಧ್ಯಾಹ್ನ 01-00 ರಿಂದ ಸಂಜೆ 5-00ರವರೆಗೆ ಸ್ಥಳಃ ಕುಲಸಚಿವರು(ಪರೀಕ್ಷಾಂಗ)ರವರಕಛೇರಿ, ದಾವಣಗೆರೆ ವಿಶ್ವವಿದ್ಯಾನಿಲಯ,ಶಿವಗಂಗೋತ್ರಿ, ದಾವಣಗೆರೆ.

**ಸೂಚನೆಗಳು:**

1. ಪಾವತಿಸಬೇಕಾದ ಒಟ್ಟು ಶುಲ್ಕಕ್ಕೆ (ಅರ್ಜಿ ಶುಲ್ಕ ಒಳಗೊಂಡಂತೆ) ಡಿ.ಡಿಯನ್ನು ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ ಇವರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕಿನಲ್ಲಿ ಮಾತ್ರ ಸಂದಾಯವಾಗುವಂತೆ ಪಡೆಯಬೇಕು. ನಿಗದಿತ ಶುಲ್ಕಕ್ಕೆ ವಿದ್ಯಾರ್ಥಿಗಳಿಂದ ನಗದಾಗಿ ಹಣ ಸ್ವೀಕರಿಸಿದಲ್ಲಿ ಒಟ್ಟು ಮೊತ್ತಕ್ಕೆ ಡಿ.ಡಿ. ಪಡೆದು ಕಳುಹಿಸಲು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ. ಅಥವಾ ನಿಗದಿಪಡಿಸಿದ ದಿನಾಂಕದಂದು ಡಿಡಿ/ಚಲನ್‌ನೊಂದಿಗೆ ಶುಲ್ಕ ಜಮಾ ಮಾಡಲು ಆಗದಿದ್ದಲ್ಲಿ, ಆ ದಿನವೇ ಯಾವುದೇ ಬ್ಯಾಂಕಿನಿಂದ RTGS/NEFT ಮೂಲಕ ವಿಶ್ವವಿದ್ಯಾನಿಲಯ ಖಾತೆ ಸಂಖ್ಯೆ 64050447124 (IFSC-Code SBMY0040869) ಗೆ ಜಮಾ ಮಾಡಲು ತಿಳಿಸಲಾಗಿದೆ. ಹೀಗೆ ಜಮಾ ಮಾಡಿದ ಶುಲ್ಕದ ವಿವರದ ಒಂದು ಪ್ರತಿಯನ್ನು ಪರೀಕ್ಷಾಂಗ ವಿಭಾಗಕ್ಕೆ ಹಾಗೂ ಒಂದು ಪ್ರತಿಯನ್ನು ಹಣಕಾಸು ವಿಭಾಗಕ್ಕೆ ಕಡ್ಡಾಯವಾಗಿ ಕಳುಹಿಸತಕ್ಕದ್ದು.

TPO

2. ವಿದ್ಯಾರ್ಥಿಗಳು ಖುದ್ದಾಗಿ ಬಂದು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಜೆರಾಕ್ಸ್ ಪ್ರತಿಯನ್ನು ಪಡೆಯತಕ್ಕದ್ದು, ಮತ್ತು ಕಾಲೇಜಿನಿಂದ ಪಡೆದಿರುವ ಗುರುತಿನ ಚೀಟಿಯನ್ನು (IdentityCard) ಕಡ್ಡಾಯವಾಗಿ ತೋರಿಸತಕ್ಕದ್ದು.

3. ಪಾಸು ಮಾಡಿದ ವಿಷಯಕ್ಕೆ ಒಮ್ಮೆ ಅರ್ಜಿ ಹಾಕಿದಲ್ಲಿ ಮರು ಮೌಲ್ಯಮಾಪನಗೊಂಡ ಬಳಿಕ ಪಡೆದ ಅಂಕಗಳೇ ಅಂತಿಮವೆಂದು ತಿಳಿಯತಕ್ಕದ್ದು.

4. ಅಭ್ಯರ್ಥಿಯು ಉತ್ತರ ಪತ್ರಿಕೆ ನೋಡುವಿಕೆಗೆ (Seeing) ಒಂದಕ್ಕೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

5. ಅಭ್ಯರ್ಥಿಗಳು ಅರ್ಜಿಯಲ್ಲಿ ನೋಂದಣಿ ಸಂಖ್ಯೆ, ಪತ್ರಿಕೆಯ ಹೆಸರು,ಕೋಡ್ ಸಂಖ್ಯೆ-ಇವುಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಸೈದ್ಧಾಂತಿಕ ಪತ್ರಿಕೆಯ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದಾಗ ಸೈದ್ಧಾಂತಿಕ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಮಾತ್ರ ನಮೂದಿಸಬೇಕು. ಪ್ರಾಯೋಗಿಕ ಪರೀಕ್ಷೆಗೆ ಮರುಮೌಲ್ಯಮಾಪನಕ್ಕೆ ಅವಕಾಶವಿರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಅರ್ಜಿನಮೂನೆಯನ್ನು ನೋಡಬಹುದು.

6. ***ಈ ಪ್ರಕಟಣೆಯೊಂದಿಗೆ ಲಗತ್ತಿಸಿರುವ ಅನುಬಂಧ-1ರ ನಮೂನೆಯಂತೆ XL Formatನ್ನು CDಯಲ್ಲಿ ತಯಾರಿಸಿ ( Course wise & Semester wise ಪ್ರತ್ಯೇಕವಾಗಿ) ವಿದ್ಯಾರ್ಥಿಗಳ ನೋಂದಣಿಸಂಖ್ಯೆ, ಹೆಸರು, ವಿಷಯಗಳನ್ನು ನಮೂದಿಸಿ ಪ್ರಾಂಶುಪಾಲರು ಕ್ರೋಢೀಕರಿಸಿದ ಮಾಹಿತಿಯನ್ನು ಮತ್ತು ಅರ್ಜಿಗಳನ್ನು ಕುಲಸಚಿವರು (ಪರೀಕ್ಷಾಂಗ)ರವರ ಕಛೇರಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-577002. ಇವರಿಗೆ ದಿನಾಂಕ:20/03/2017ರಂದು ಸಂಜೆ 5.00ರೊಳಗಾಗಿ ಖುದ್ದಾಗಿ ಸಲ್ಲಿಸಲು ಸೂಚಿಸಲಾಗಿದೆ. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.***

7. ಉತ್ತರ ಪತ್ರಿಕೆ ಮರುಮೌಲ್ಯಮಾಪನ/ ಮರುಸಂಕಲನಕ್ಕೆ ನೋಡುವಿಕೆಗೆ ಅರ್ಜಿಯನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ಜಾಲ.www.davanageréuniversity.ac.inನಲ್ಲಿ ಪ್ರಕಟಗೊಳಿಸಲಾಗಿದೆ.

ಕುಲಸಚಿವರು(ಪರೀಕ್ಷಾಂಗ) 21/03
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577002.

ಗೆ:

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಎಲ್ಲಾ ಬಿ.ಇಡಿ. ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಇದನ್ನು ವಿದ್ಯಾರ್ಥಿಗಳ ಮಾಹಿತಿಗಾಗಿ ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಈ ಸಂಬಂಧ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

**ಪ್ರತಿ:**

1 ಆಪ್ತ ಶಾಖೆ, ಮಾನ್ಯಕುಲಪತಿಗಳು/ಕುಲಸಚಿವರು(ಆಡಳಿತ)/ಕುಲಸಚಿವರು(ಮೌಲ್ಯಮಾಪನ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02
2 ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02
3 ಉಪಕುಲಸಚಿವರು(ಪರೀಕ್ಷಾ ವಿಭಾಗ) ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ-02
4 ಕಛೇರಿ ಪ್ರತಿ.